# ಸಿಪಿಸಿಆರ್‌ಐ ಕೃಷಿ ಮೇಳ : ವಸ್ತುಪ್ರದರ್ಶನ ಉದ್ಘಾಟನೆ





ವಿಟ್ಲ, ಜ. 10: ವಿಟ್ಲ ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆಯಲ್ಲಿ ಶನಿವಾರ ನಡೆದ ಕೃಷಿ ಮೇಳ- 2015 ಕಾರ್ಯಕ್ರಮದಲ್ಲಿ ಆಯೋಜಿಸಲಾದ ಕೃಷಿ ವಸ್ತು ಪ್ರದರ್ಶನವನ್ನು ಕೇಂದ್ರ ಕಾನೂನು ಸಚಿವ ಡಿ.ವಿ. ಸದಾನಂದ ಗೌಡ ಉದ್ಘಾಟಿಸಿದರು. ಈ ವಸ್ತುಪ್ರದರ್ಶನ ಕೃಷಿಕರ ಗಮನ ಸೆಳೆಯಿತು.

ಶಿವಮೊಗ್ಗದ ಹೇರ್ಳೆ ಟೆಕ್ನಿಕಲ್ ಮತ್ತು ರಿಸರ್ಚ್ ವರ್ಕ್ಸ್‌ನ ವತಿಯಿಂದ ಮರ ಏರುವ ಯಂತ್ರ, ಕಾಸರಗೋಡು ಕೃಷಿ ವಿಜ್ಞಾನ ಕೇಂದ್ರ(ಕೆ.ವಿ.ಕೆ) ವತಿಯಿಂದ ಚಕ್ಕುಲಿ, ಉಂಡೆ, ಚಟ್ನಿ ಹುಡಿ ಮೊದಲಾದ ತಿಂಡಿಗಳ ಮಾರಾಟ ಹಾಗೂ ಪ್ರದರ್ಶನ, ಕರ್ನಾಟಕ ಸರಕಾರದ ದಕ್ಷಿಣ ಕನ್ನಡ ಜಿಲ್ಲಾ ತೋಟಗಾರಿಕಾ ಇಲಾಖೆಯ ವತಿಯಿಂದ 20 ಬೀಜಗಳ ಪ್ರದರ್ಶನ ಹಾಗೂ ಮಾರಾಟವಿತ್ತು. ಮಂಗಳೂರು ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ಹಲಸಿನ ರಸ ಹಾಗೂ ಮೌಲ್ಯವರ್ಧಿತ ಉತ್ಪನ್ನಗಳು, ಕಾಸರಗೋಡು ಕೃಷಿ ವಿಜ್ಞಾನ ಕೇಂದ್ರ (ಸಿಪಿಸಿಆರ್‌ಐ)ದ ವತಿಯಿಂದ ಹಲಸಿನ ವಿವಿಧ ವಸ್ತುಗಳು, ಶಿವಮೊಗ್ಗ ಕೃಷಿ ತೋಟಗಾರಿಕಾ ವಿಶ್ವವಿದ್ಯಾಲಯದ ವತಿಯಿಂದ ತೆಂಗು, ಪಪ್ಪಾಯಿ, ಪೆಪ್ಪರ್, ಮೀಟರ್ ಅಲಸಂಡೆ(ಗುಳ್ಳ), ಗೇರು ಗಿಡ, ಉಡುಪಿ ಮಲ್ಲಿಗೆ, ಚೋಟವಾಡಿ, ಮೋಹಿತ್ ಅಡಿಕೆ, ಶಿವಮೊಗ್ಗ ಕೃಷಿ ಮತ್ತು ತೋಟಗಾರಿಕಾ ಸಂಶೋಧನಾ ಸಂಸ್ಥೆ ವತಿಯಿಂದ ವಿವಿಧ ತಳಿಯ ಗಿಡಗಳ ಪ್ರದರ್ಶನವಿತ್ತು.

ಕೆನರಾ ಬ್ಯಾಂಕ್ ವಿಟ್ಲ ಶಾಖೆಯ ಸಿಬಂದಿ ಸ್ಟಾಲ್ ಇಟ್ಟು ಕೃಷಿಸಾಲ, ಉದ್ಯೋಗ ಸಾಲ, ವಾಹನ ಸಾಲಗಳ ಬಗ್ಗೆ ಮಾಹಿತಿ ನೀಡಿದರು. ಮಡಿಕೇರಿ ಸಾಂಬಾರ ಬೆಳೆಗಳ ಸಂಶೋಧನಾ ಸಂಸ್ಥೆಯವರಿಂದ ಪೆಪ್ಪರ್, ಲವಂಗ, ಕಾಳು ಮೆಣಸು, ಏಲಕ್ಕಿ ಇವುಗಳು ಪ್ರದರ್ಶನಗೊಂಡವು. ಬಾಗಲಕೋಟೆ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯದ ವತಿಯಿಂದ ಬಾಲಿ ಅಡಿಕೆ, ಕೆಂಪು ಅಡಿಕೆ, ಹಾಲುಕೆಸು(ಶಿರಸಿ) ಪ್ರದರ್ಶನಗೊಂಡವು. ಬಿಲ್ಲಂಪದವು ನಾರಾಯಣ ಭಟ್ ಅವರಿಂದ (ಬೀಜಸಿರಿ ಸಾವಯವ ಕೃಷಿ) ಸುಮಾರು 44 ಬಗೆಯ ಬೀಜಗಳ ಮಾರಾಟ ಹಾಗೂ ಪ್ರದರ್ಶನ, ಬೆಳ್ತಂಗಡಿ ದುರ್ಗಾ ಇಂಡಸ್ಟ್ರಿ ಇವರಿಂದ ಲೆಮನ್, ಮ್ಯಾಂಗೋ, ಆರೆಂಜ್, ಮಿರಿಂಡ ಮೊದಲಾದ ತಂಪು ಪಾನೀಯಗಳ ಮಾರಾಟ ಮಳಿಗೆ ಗಮನ ಸೆಳೆಯಿತು.

ಎಸ್‌ಆರ್‌ಕೆ ಕೃಷಿಕ ಉಪಕರಣಗಳಾದ ಏಣಿ, ಕೈಗಾಡಿ ಮೊದಲಾದವುಗಳು ಪ್ರದರ್ಶನಗೊಂಡವು. ಉಪ್ಪಿನಂಗಡಿ ಶ್ರೀ ದುರ್ಗಾ ಮಹಿಳಾ ಗೃಹ ಉದ್ಯಮ ಇವರಿಂದ ರುಚಿ ಶುಂಠಿ, ರುಚಿ ಲಿಂಬೆ, ವಾರಣಾಸಿ ಸಂಶೋಧನಾ ಪ್ರತಿಷ್ಠಾನ ವತಿಯಿಂದ ಸಸಿಗಳು ಹಾಗೂ ಬೀಜಗಳ ಪ್ರದರ್ಶನ ನಡೆಯಿತು.

ರಾಜನ್ ಬಿದಿರಕ್ಕಿ ಅವರಿಂದ ಬಿದಿರಕ್ಕಿಗಳ ಪ್ರದರ್ಶನ ಮತ್ತು ಮಾರಾಟ ಮಳಿಗೆ ನಡೆದಿತ್ತು. ಸೆಲ್ಕೋ ಸೌರ ದೀಪ ಇವರಿಂದ ಸೌರ ದೀಪದ ಬಳಕೆಯ ಬಗ್ಗೆ ಮಾಹಿತಿ ನೀಡಲಾಯಿತು. ಪುತ್ತೂರು ಗೇರು ಸಂಶೋಧನಾ ನಿರ್ದೇಶನಾಲಯ ಇವರಿಂದ ವಿವಿಧ ಬೀಜಗಳು ಹಾಗೂ ಪಬ್ಲಿಕೇಶನ್ಸ್ ಹಾಗೂ ಕಸಿ ಗಿಡಗಳ ಮಾರಾಟ ಹಾಗೂ ಪ್ರದರ್ಶನ, ಗೇರು ಉತ್ಪನ್ನಗಳ ಬಗ್ಗೆ ಮಾಹಿತಿ ನೀಡಲಾಯಿತು.

